ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

# ಗ್ರಾಮದ ಸ್ವಚ್ಛತೆ ಕಾಪಾಡುತ್ತಾ ಬದುಕು ಕಟ್ಟಿಕೊಳ್ಳುತ್ತಿರುವ ರಾಜೇಶ್ವರಿ



ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನಲ್ಲಿರುವ ಹೊಸಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 12 ಹಳ್ಳಿಗಳಿವೆ. ಈ ಹಳ್ಳಿಗಳಲ್ಲಿ 1839 ಕುಟುಂಬಗಳಿದ್ದು 7840 ಮಂದಿ ವಾಸಿಸುತ್ತಿದ್ದಾರೆ. ಸ್ವಚ್ಛ ಭಾರತ್ ಮಿಷನ್ ಯೋಜನೆಯ ಅನುಷ್ಠಾನದಿಂದ ಕಸ ಸಂಗ್ರಹಣೆ ಹಾಗೂ ವಿಲೇವಾರಿಯಲ್ಲಿ ಹೊಸಕೆರೆ ಗ್ರಾಮ ಪಂಚಾಯತಿ ತನ್ನದೇ ಆದ ಸಾಧನೆ ಮಾಡುತ್ತಿದೆ.

ಸ್ವಚ್ಛ ಭಾರತ್ ಮಿಷನ್ ಯೋಜನೆ ಅನುಷ್ಠಾನಗೊಳಿಸುವುದಕ್ಕೂ ಮುನ್ನ ಹೊಸಕೆರೆಯ ಚಿತ್ರಣವೇ ಬೇರೆಯದ್ದಾಗಿತ್ತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಎಲ್ಲೆಂದರಲ್ಲಿ ಕಸ-ಕಡ್ಡಿಗಳ ರಾಶಿ, ಹಸಿಕಸ-ಒಣಕಸ ಎನ್ನದೆ ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಎಸೆಯಲಾಗುತ್ತಿತ್ತು. ಕಸದ ನಿರ್ವಹಣೆ ಮಾಡುವುದು ಕಬ್ಬಿಣದ ಕಡಲೆಯಂತಾಗಿತ್ತು. ಆದರೆ ಎಸ್.ಬಿ.ಎಂ(ಗ್ರಾ) ಯೋಜನೆಯ ಜಾರಿಯಿಂದ ಜನರಲ್ಲಿ ಕಸ ವಿಲೇವಾರಿಯ ಜಾಗೃತಿ ಮೂಡಿದೆ.




ಗ್ರಾಮೀಣ ಪ್ರದೇಶದ ಮಹಿಳೆಯರು ಬಹುಪಾಲು ಕೃಷಿ ಚಟುವಟಿಕೆ ಅಥವಾ ಕೂಲಿ ಕೆಲಸದಲ್ಲಿ ತೊಡಗಿಸಿಕೊಂಡಿರುತ್ತಾರೆ. ಆದರೆ ಸ್ವಚ್ಛ ಭಾರತ ಮಿಷನ್ (ಗ್ರಾಮೀಣ) ಹಾಗೂ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಯೋಜನೆಯಿಂದ ಮಹಿಳೆಯರು ಜೀವನೋಪಾಯಕ್ಕೆ ವಿವಿಧ ಕೆಲಸಗಳನ್ನು ಆಯ್ದು ಕೊಳ್ಳುತ್ತಿದ್ದಾರೆ. ಈ ಸಾಲಿನಲ್ಲಿ ರಾಜೇಶ್ವರಿ ಕೂಡ ಒಬ್ಬರು.

ಗ್ರಾಮಗಳಿಂದ ಕಸವನ್ನು ಸಂಗ್ರಹಣೆ ಮಾಡಿ ಸ್ವಚ್ಛ ಸಂಕೀರ್ಣಗಳಿಗೆ ಕೊಂಡೊಯ್ಯುವ ಸ್ವಚ್ಛ ವಾಹಿನಿ ವಾಹನದ ಚಾಲಕಿಯಾಗಿ ರಾಜೇಶ್ವರಿಯವರು ಕಾರ್ಯನಿರ್ವಹಿಸುತ್ತಿದ್ದಾರೆ. ಬಡಕುಟುಂಬದಲ್ಲಿ ವಾಸಿಸುತ್ತಿರುವ ರಾಜೇಶ್ವರಿ ಕುಟುಂಬದ ನಿರ್ವಹಣೆಗಾಗಿ ಮೊದಲಿಗೆ ದಿನಗೂಲಿ ಮಾಡುತ್ತಿದ್ದರು. ಸಂಕಷ್ಟದ ಬದುಕು ನಡೆಸುತ್ತಿದ್ದ ಸಂದರ್ಭದಲ್ಲಿ ಸ್ವಸಹಾಯ ಸಂಘಗಳು ಮತ್ತು ಒಕ್ಕೂಟಗಳ ಮಹಿಳೆಯರಿಗೆ ವಾಹನ ಚಾಲನಾ ತರಬೇತಿ ನೀಡಲಾಗುತ್ತಿದೆ ಎಂದು ರಾಜೇಶ್ವರಿ ತಿಳಿದರು. ನಂತರ ವಾಹನ ಚಾಲನಾ ತರಬೇತಿಯಲ್ಲಿ ಭಾಗವಹಿಸಿ ಚಾಲನಾ ಪರವಾನಗಿ ಪಡೆದರು. ಈಗ ಸ್ವಚ್ಛ ವಾಹಿನಿಯ ಚಾಲಕಿಯಾಗಿ ಆಯ್ಕೆಯಾಗಿ ಜೀವನ ಸಾಗಿಸುತ್ತಿದ್ದಾರೆ. ರಾಜೇಶ್ವರಿಯವರು ಸ್ವಚ್ಛ ವಾಹಿನಿ ಚಾಲಕಿಯಾಗಿ ಗ್ರಾಮದ ನೈರ್ಮಲ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಸ್ವಚ್ಛ ವಾಹಿನಿ ಚಾಲಕಿಯಾಗಿರುವ ಬಗ್ಗೆ ಹೆಮ್ಮೆ ವ್ಯಕ್ತಪಡಿಸುತ್ತಾರೆ.




"ನಾನು ಹತ್ತನೇ ತರಗತಿಯವರಗೆ ವಿದ್ಯಾಭ್ಯಾಸವನ್ನು ಮುಗಿಸಿದ್ದು, ತದನಂತರದಲ್ಲಿ ಗ್ರಾಮದಲ್ಲೆ ಕೂಲಿಕೆಲಸಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದೆ. ದಿನದ ಕೂಲಿಯು ತುಂಬಾ ಕಡಿಮೆಯಿದ್ದು ಜೀವನ ನಡೆಸುವುದೇ ಕಷ್ಟವಾಗಿತ್ತು. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಯೋಜನೆಯಡಿಯಲ್ಲಿ ಉಚಿತ ವಾಹನ ತರಬೇತಿ ನೀಡುತ್ತಿರುವುದು ತಿಳಿದು ನನಗೂ ವಾಹನ ಚಲಾಯಿಸಲು ಆಸಕ್ತಿ ಹುಟ್ಟಿತು. ನಂತರ ತುಮಕೂರಿನಲ್ಲಿ 3 ತಿಂಗಳ ಕಾಲ ವಾಹನ ಚಾಲನಾ ತರಬೇತಿ ಪಡೆದುಕೊಂಡೆ. ಸ್ವಲ್ಪ ದಿನ ಕಳೆದ ನಂತರ ಹೊಸಕೆರೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸ್ವಚ್ಛ ಭಾರತ್ ಮಿಷನ್ ಯೋಜನೆಯ ಸ್ವಚ್ಛ ವಾಹಿನಿ ಚಾಲಕರಾಗಿ ಕೆಲಸ ಮಾಡೋಕೆ ಮಹಿಳೆಯರಿಗೆ ಅವಕಾಶ ಇದೆ ಅಂದಾಗ ನಾನು ಕೆಲಸಕ್ಕೆ ಸೇರಿಕೊಂಡೆ. ಈ ಮೂಲಕ ಚಾಲಕಿಯಾಗಿ ಕಾರ್ಯನಿರ್ವಹಿಸಬೇಕೆಂಬ ನನ್ನ ಕನಸು ನನಸಾಯಿತು. ಈಗ ಜನರು ಸಹ ನನ್ನನ್ನು ಗುರುತಿಸುತ್ತಾರೆ. ಇದರಿಂದ ಸಂತೋಷವಾಗುತ್ತದೆ" ಎಂದು ಖುಷಿ ವ್ಯಕ್ತಪಡಿಸುತ್ತಾರೆ ರಾಜೇಶ್ವರಿ.

ರಾಜೇಶ್ವರಿ ಅವರು ಸ್ವಚ್ಛ ವಾಹಿನಿಯ ಚಾಲಕಿಯಾಗಿ ನೆಮ್ಮದಿ ಬದುಕು ನಡೆಸುತ್ತಿದ್ದಾರೆ. ಪ್ರತಿನಿತ್ಯ ಗ್ರಾಮಗಳಿಗೆ ತೆರಳಿ ಸ್ವಚ್ಛ ಭಾರತ್ ಮಿಷನ್ ಯೋಜನೆಯ ಬಗ್ಗೆ ಜನರಿಗೆ ಮಾಹಿತಿ ನೀಡಿ ಕಸ ವಿಲೇವಾರಿಯ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಗ್ರಾಮದಲ್ಲಿ ಸ್ವಚ್ಛತೆ ಕಾಪಾಡಿದರೆ ಆಗುವ ಲಾಭಗಳ ಬಗ್ಗೆ ಜನರಿಗೆ ತಿಳಿ ಹೇಳುತ್ತಾರೆ. ಕಸ ವಿಂಗಡಣೆ ಬಗ್ಗೆ ಮನೆ ಮನೆಗೂ ಮಾಹಿತಿ ನೀಡುತ್ತಾರೆ. ಈ ವೃತ್ತಿಯನ್ನು ಉತ್ತಮವಾಗಿ ನಿರ್ವಹಿಸಿ ರಾಜೇಶ್ವರಿಯವರು ಒಳ್ಳೆಯ ಹೆಸರು ಗಳಿಸಿದ್ದಾರೆ. ಗ್ರಾಮದ ಜನರು ಸಹ ಇವರನ್ನು ನೋಡಿ ಹೆಮ್ಮೆ ಪಡುತ್ತಾರೆ.

ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ಸಾಧನೆ ಮಾಡುತ್ತಿದ್ದಾರೆ. ಪುರುಷ ಪ್ರಧಾನವಾದ ಚಾಲನಾ ವೃತ್ತಿಯನ್ನು ಇಂದು ಮಹಿಳೆಯರು ಯಶಸ್ವಿಯಾಗಿ ಮಾಡುತ್ತಿದ್ದಾರೆ. ರಾಜೇಶ್ವರಿ ಜೀವನದಲ್ಲಿ ಎದುರಾದ ನೂರಾರು ಕಷ್ಟಗಳನ್ನು ಮೆಟ್ಟಿ ನಿಂತು ಇಂದು ಸ್ವಚ್ಛ ವಾಹಿನಿ ವಾಹನದ ಚಾಲಕಿಯಾಗಿ ಹಲವಾರು ಮಹಿಳೆಯರಿಗೆ ಮಾದರಿಯಾಗಿದ್ದಾರೆ.

**ನೀರು ಮತ್ತು ನೈರ್ಮಲ್ಯ ಕುರಿತ ಸಮಸ್ಯೆಗಳಿಗೆ**
**ಪರಿಹಾರ ಸಹಾಯವಾಣಿ 9480985555 ಗೆ ಕರೆ ಮಾಡಿ**